# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1436
ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 20/03/2025
ಉತ್ತರಿಸುವ ಸಚಿವರು : ಉಪ ಮುಖ್ಯ ಮಂತ್ರಿಯವರು

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಬೆಳಗಾವಿ ಜಿಲ್ಲೆ ನಿಪ್ಪಾಣಿ ಎಂ.ಆರ್ .ಬಿ.ಸಿ. ಉಪ ವಿಭಾಗ ನಂ.20 ಈ ಕಛೇರಿಯ ಒಂದು ವಾಹನ ಚಾಲಕ ಹುದ್ದೆಯನ್ನು ಮರು ಸ್ಥಳಾಂತರಿಸಲು ಕರ್ನಾಟಕ ನೀರಾವರಿ ನಿಗಮ ನಿಯಮಿತ ಹಂತದಲ್ಲಿ ಪರಿಶೀಲನೆಯಲ್ಲಿದೆ ಎಂದು 2023 ರ ಬಜೆಟ್ ಅಧಿವೇಶನದ ಸಂದರ್ಭದಲ್ಲಿ ಮಾನ್ಯ ಸಚಿವರು ಉತ್ತರ ನೀಡಿದ್ದು, ಈವರೆಗೂ ಸ್ಥಳಾಂತರ ಮಾಡದಿರಲು ಕಾರಣಗಳೇನು; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ನೀ.ಇ: 75: ಸೇಇಸಿ: 2001, ದಿನಾಂಕ:28.06.2001 ಹಾಗೂ ಪ್ರಧಾನ ಇಂಜಿನೀಯರ್ ಜಲಸಂಪನ್ಮೂಲ ಇಲಾಖೆ, ಬೆಂಗಳೂರು ಇವರ ಹಿಂಬರಹ ದಿನಾಂಕ:02.07.2001 ರನ್ವಯ ಸಹಾಯಕ ಕಾರ್ಯಪಾಲಕ ಇಂಜಿನೀಯರ್, ಎಂ.ಆರ್.ಬಿ.ಸಿ, ಉಪ-ವಿಭಾಗ ನಂ.20, ನಿಪ್ಪಾಣಿ ಕಚೇರಿಯಿಂದ ವಾಹನ ಚಾಲಕ ಹುದ್ದೆಯನ್ನು ಕಾರ್ಯಪಾಲಕ ಇಂಜಿನೀಯರ್, ಭದ್ರಾ ನಾಲಾ ವಿಭಾಗ, ದಾವಣಗೆರೆ ಕಚೇರಿಗೆ ಸ್ಥಳಾಂತರಿಸಲಾಗಿರುತ್ತದೆ.<br><br>ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಇಲಾಖೆ ಇವರು ದಿನಾಂಕ:14.08.2025 ರ ಪತ್ರದಲ್ಲಿ ಸದರಿ ಸ್ಥಳಾಂತರಿಸಿದ ವಾಹನ ಚಾಲಕ ಹುದ್ದೆಯನ್ನು ರದ್ದುಪಡಿಸಿ ಮೂಲ ಕಛೇರಿಗೆ ಹಿಂದಿರುಗಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.<br><br>ಸದರಿ, ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. |
| (ಆ) | ಸದರಿ ವಾಹನ ಚಾಲಕ ಹುದ್ದೆಯನ್ನು ಮರು ಸ್ಥಳಾಂತರಿಸುವ ಕುರಿತು ಅಧಿಕಾರಿಗಳ ಪರಿಶೀಲನೆ ಇನ್ನೂ ಎಷ್ಟು ಕಾಲಾವಕಾಶ ಬೇಕು; (ಸಂಪೂರ್ಣ ವಿವರ ಒದಗಿಸುವುದು). | |
| (ಇ) | ಸದರಿ ವಾಹನ ಚಾಲಕ ಹುದ್ದೆಯನ್ನು ಯಾವ ಕಾಲಮಿತಿಯೊಳಗೆ ಮರು ಸ್ಥಳಾಂತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದು? (ವಿವರ ಒದಗಿಸುವುದು) | |

ಸಂಖ್ಯೆ: ಜಸಂಇ 102 ಸೇಇಸಿ 2025

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿ